ಈ ರೀತಿಯಾದ ಅರಣ್ಯ ಪ್ರದೇಶದ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ ೧೯೬೩ ಸೆಕ್ಷನ್ ೬೪(ಎ) ಪ್ರಕಾರ ಅವಕಾಶವಿರುತ್ತದೆ.

ಊ) ಕೇಂದ್ರ ಸರ್ಕಾರದ ಪತ್ರ ದಿನಾಂಕ : ೩-೫-೨೦೦೨ರಲ್ಲಿ ನೀಡಿದ ನಿರ್ದೇಶನದ ಮೇರೆಗೆ ಅರಣ್ಯ ಪ್ರದೇಶದಲ್ಲಾದ ಎಲ್ಲಾ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ ೧೯೬೩ ಸೆಕ್ಷನ್ ೬೪(ಎ) ಪ್ರಕಾರ ನಡುವಳಿಗಳನ್ನು ಜರುಗಿಸಿ ೪೧೩೦೪ ಪ್ರಕರಣಗಳನ್ನು ಒತ್ತವರಿಯನ್ನು ತೆರವುಗೊಳಿಸಲಾಗಿದೆ. ಬಾಕಿ ಉಳಿದ ಪ್ರಕರಣಗಳು ೯೬೪೭೩ ಇದ್ದು ಇವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅದಲ್ಲದೆ ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦ರಡಿಯಲ್ಲಿ ದಿನಾಂಕ : ೨೭-೪-೧೯೭೮ರ ಪೂರ್ವದ ೧೯೩೪೪೩ ಪ್ರಕರಣಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ ಆ ಪ್ರಕಾರ ಸಕ್ರಮಗೊಳಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೭೯ (೨೪೧೩)

ಸದಸ್ಯರ ಹೆಸರು : ಶ್ರೀ ಸಿದ್ದು ಸಾವದಿ (ಜಮಖಂಡಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಜಮಖಂಡಿ ತಾಲ್ಲೂಕಿನಲ್ಲಿ ಪ್ರವಾಹಕ್ಕೆ ಒಳಗಾದ ಗ್ರಾಮಗಳು ಯಾವುವು ?

ಆ)ಅವುಗಳನ್ನು ಸ್ಥಳಾಂತರಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ, ಹಾಗಿದ್ದಲ್ಲಿ, ಯಾವಾಗ ಮತ್ತು ಎಲ್ಲಿಗೆ ಸ್ಥಳಾಂತರಿಸಲಾಗುವುದು?

ಉತ್ತರ

ಅ) ಜಮಖಂಡಿ ತಾಲ್ಲೂಕಿನಲ್ಲಿ ಈ ವರ್ಷ ಒಟ್ಟು ೩೫ ಗ್ರಾಮಗಳು ಪ್ರವಾಹಕ್ಕೆ ತುತ್ತಾಗಿರುತ್ತದೆ.

ಪೂರ್ಣ ಭಾದಿತಗೊಂಡ ಗ್ರಾಮಗಳು

೧) ಆಸ್ಕಿ, ೨) ತಮದಡ್ಡಿ ೩) ಕಂಕಣವಾಡಿ ೪) ಕಡಕೋಳ ೫) ಮುತ್ತೂರ ೬) ಶಿರಗುಪ್ಪಿ ೭) ಜಂಬಗಿ ಬಿ.ಕೆ. ೮) ಜಂಬಗಿ ಕೆ.ಡಿ., ೯) ಟಕ್ಕೊಡ ೧೦) ಟಕ್ಕಳಕಿ ೧೧) ಶೂರಪಾಲಿ ೧೨) ತುಬಚಿ ೧೩) ಮೈಗೂರ

ಭಾಗಶಃ ಬಾದಿತಗೊಂಡ ಗ್ರಾಮಗಳು

೧) ಹಳಿಂಗಳಿ ೨) ಮದನಮಟ್ಟಿ ೩) ಕುರಿಹಳ್ಳಿ ೪) ಹಿಪ್ಪರಗಿ ೫) ಅಲಗೂರ ೬)ಕವಟಗಿ ೭) ಚಿಕ್ಕಪಡಸಲಗಿ

ಬೆಳೆಹಾನಿಯಾದ ಗ್ರಾಮಗಳು

೧) ತೀರದಾಳ (ಗ್ರಾಮೀಣ) ೨) ಕುಂಚನೂರ ೩) ಚಕನೂರ ೪) ಚಿನಗುಂಡಿ ೫) ಅಲಬಾಳ ೬) ಕುಂಬಾರಹಳ್ಳ ೭) ಬಿದರಿ ೮) ಜನವಾಡ ೯) ರಬಕವಿ ೧೦) ಆಸಂಗಿ ೧೧)ಹೊಸೂರ ೧೨) ಜಮಖಂಡಿ (ಗ್ರಾಮೀಣ) ೧೩) ಹಿರೇಪಡಸಲಗಿ ೧೪) ನಾಗನೂರ ೧೫) ಸನಾಳ

ಆ) ಸ್ಥಳಾಂತರಿಸುವ ಯೋಜನೆ ಸರ್ಕಾರದ ಗಮನದಲ್ಲಿದೆ. ಪೂರ್ಣ ಬಾದಿತಗೊಂಡ ಗ್ರಾಮಗಳ ಪೈಕಿ ಈಗಾಗಲೇ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಪುನರ್ವಸತಿ ಕಲ್ಪಿಸಿದ ಗ್ರಾಮಗಳು ಈ ಕೆಳಕಂಡಂತಿದೆ.

೧) ಕಂಕಣವಾಡಿ ೨) ಕಡಕೋಳ ೩) ಮುತ್ತೂರ ೪) ಶಿರಗುಪ್ಪಿ ೫) ಟಕ್ಕೊಡ ೬) ಜಂಬಗಿ ಕೆ.ಡಿ. ೭) ಜಂಬಗಿ ಬಿ.ಕೆ. ೮) ಟಕ್ಕಳಕಿ ೯) ಶೂರಪಾಲಿ ೧೦) ತುಬಚಿ ೧೧) ಮೈಸೂರ ೧೨) ಅಲಗೂರ ೧೩) ಕವಟಗಿ ೧೪) ಚಿಕ್ಕಪಡಸಲಗಿ

ಉಳಿದ ಎರಡು ಗ್ರಾಮಗಳಾದ ೧) ಅಸ್ಕಿ ೨) ತಮದಡ್ಡಿ ಸಂಪೂರ್ಣ ಸ್ಥಳಾಂತರಿಸಲು ಹಾಗೂ ಪುನರ್‌ವಸತಿ ಕಲ್ಪಿಸಲು ಹಾಗೂ ಪುನರ್ ವಸತಿ ಕಲ್ಪಿಸಲು ಹಿಪ್ಪರಗಿ ಯೋಜನೆ ಅಥಣಿ ಕುರಿತು ಯು.ಕೆ.ಪಿ. ಆಲಮಟ್ಟಿ ಇವರಿಂದ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

೧) ಕುಲಹಳ್ಳಿ ೨) ಹಿಪ್ಪರಗಿ ಈ ಗ್ರಾಮಗಳು ಭಾಗಶಃ ಮುಳುಗಡೆಯಾಗುತ್ತಿದ್ದು ಈ ಗ್ರಾಮಗಳ ಮನೆಗಳ ಸಮೀಕ್ಷೆ ಕೈಗೊಂಡಿದ್ದು, ಹಿಪ್ಪರಗಿ ಯೋಜನೆಯಡಿ ಪುನರ್ ವಸತಿಕಾರ್ಯ ಪ್ರಗತಿಯಲ್ಲಿದೆ.

ಭಾಗಶಃ ಭಾದಿತವಾಗಿರುವ ಗ್ರಾಮಗಳಾದ ಮದನಮಟ್ಟಿ ಹಾಗೂ ಹಳಿಂಗಳಿ ಪುನರ್ ವಸತಿ ಕುರಿತು ಜಿಲ್ಲಾಧಿಕಾರಿಗಳ ಕಛೇರಿಯಿಂದ ಕ್ರಮ ಜರುಗಿಸಲಾಗುತ್ತದೆ. ಮದನಮಟ್ಟಿ ಗ್ರಾಮ ಸ್ಥಳಾಂತರಿಸಲು ರಬಕವಿ ಗ್ರಾಮದ ರಿ.ಸ. ನಂ. ೬೩/೧ ರಲ್ಲಿ ೩೨.೦೨ ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲು ಜೆ.ಎಂ.ಸಿ. ಹಂತದಲ್ಲಿದೆ. ಹಳಿಂಗಳಿ ಗ್ರಾಮ ಸ್ಥಳಾಂತರಿಸಲು ಹಳಿಂಗಳಿ ಗ್ರಾಮದ ರಿ.ಸ.ನಂ. ೧೪೨ / ಅ ರ ಗಾಯರಾಣ ಜಮೀನು ೩೩೬.೦೭ ಎಕರೆ ಗೋಮಾಳ ಜಮೀನನ್ನು ಗುರ್ತಿಸಲಾಗಿದೆ. ಹಳಿಂಗಳಿ ಮತ್ತು ಮದನಮಟ್ಟಿ ಗ್ರಾಮದ ಎಸ್ ಸಿ / ಎಸ್ ಟಿ ಜನರಿಗೆ ಮದನಮಟ್ಟಿ ಗ್ರಾಮಕ್ಕೆ ೪೩ ಮನೆಗಳು ಹಾಗೂ ಹಳಿಂಗಳಿ ಗ್ರಾಮಕ್ಕೆ ೩೪೮ ಆಶ್ರಯ ಮನೆಗಳನ್ನು ಮಂಜೂರಿಸಿದ ಮನೆಗಳ ನಿರ್ಮಾಣವನ್ನು ಶೀಘ್ರವಾಗಿ ಪ್ರಾರಂಭಿಸಲಾಗಿರುವುದು.

೪) ಹಿಪ್ಪರಗಿ ಯೋಜನೆ ಅಡಿಯಲ್ಲಿ ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಗ್ರಾಮ ಮಾತ್ರ ಭಾಗಶಃ ಮುಳುಗಡೆಯಾಗುತ್ತಿದೆ. ಹೀಗಾಗಿ ಈ ಗ್ರಾಮವನ್ನು ಸಂಪೂರ್ಣವಾಗಿ ಸ್ಥಳಾಂತರಿಸುವ ಅವಶ್ಯಕತೆಯಿಲ್ಲ. ಗ್ರಾಮದಲ್ಲಿ ಬಾಧಿತವಾಗುವ ಕಟ್ಟಡಗಳನ್ನು ಮಾತ್ರ ಅದೇ ಗ್ರಾಮದಲ್ಲಿನ ಎತ್ತರದ ಪ್ರದೇಶಕ್ಕೆ ಸ್ಥಳಾಂತರಿಸಲಾಗುವುದು ಮತ್ತು ಬಾಧಿತ ಕುಟುಂಬಗಳಿಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಈ ಸಂಬಂಧ ಪುನರ್ವಸತಿ ಪ್ಯಾಕೇಜನ್ನು ಸರ್ಕಾರಿ ಆದೇಶ ಸಂಖ್ಯೆ : ಕಂ ಇ ೮೨ ಆರ್ ಇ ಹೆಚ್ ೨೦೦೪ ದಿ : ೨೬--೧೨--೨೦೦೬ ರಲ್ಲಿ ಈಗಾಗಲೇ ಮಂಜೂರು ಮಾಡಲಾಗಿದೆ.

ಈ) ಹಳ್ಳಿಗಳನ್ನು ಸ್ಥಳಾಂತರಿಸುವ ಕಾರ್ಯ ನಡೆದಿದೆ ಮತ್ತು ಪ್ರವಾಹದಿಂದ ಬಾಧಿತವಾಗಿರುವ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸುವ ಸಲುವಾಗಿ ಸರ್ಕಾರದಿಂದ ಆಶ್ರಯ ಯೋಜನೆಯಡಿ ಬಿ.ಪಿ.ಎಲ್. ಎಸ್.ಸಿ./ ಎಸ್.ಟಿ. ವರ್ಗದವರಿಗೆ ೪೦೧ ಮನೆಗಳನ್ನು ಮಂಜೂರು ಮಾಡಲಾಗಿದೆ. ಬಿ.ಪಿ.ಎಲ್ ಇತರೆ ವರ್ಗದವರಿಗೆ ೭೭೮ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೮೧ (೨೪೧೫)

ಸದಸ್ಯರ ಹೆಸರು : ಶ್ರೀ ಸಿದ್ದು ಸಾವದಿ (ಜಮಖಂಡಿ)

ಉತ್ತರಿಸುವವರು : ಶ್ರೀ ಅಪ್ಪಾ ಸಾಹೇಬ್ (ಅಪ್ಪು) ಮ. ಪಟ್ಟಣ ಶೆಟ್ಟಿ. (ಮಾನ್ಯ ಜವಳಿ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿರುವ ಕೆಹೆಚ್‌ಡಿಸಿ ನೇಕಾರರ ಸಂಖ್ಯೆ ಎಷ್ಟು ? ಅವರು ಯಾವ ರೀತಿಯ ಬಟ್ಟೆಗಳನ್ನು ತಯಾರು ಮಾಡುತ್ತಿದ್ದಾರೆ ;

ಆ) ಕೆ ಹೆಚ್‌ಡಿಸಿ ನೇಕಾರರಿಗೆ ಆಯವ್ಯಯದಲ್ಲಿ ನೀಡಲಾಗಿರುವ ಸೌಲಭ್ಯಗಳು ಯಾವುವು ;

ಇ) ಸಾಲ ಮನ್ನಾ ಬಡ್ಡಿ ಮನ್ನಾ ಮತ್ತು ವಿದ್ಯುತ್ ರಿಯಾಯ್ತಿಯಲ್ಲಿ ಕೆಹೆಚ್ ಡಿ ಸಿ ನೇಕಾರರಿಗೆ ಎಷ್ಟು ಸೌಲಭ್ಯಗಳು ದೊರೆತಿವೆ ;

ಈ) ಸದರಿ ನೇಕಾರರು ಕಳೆದ ೧೫ ವರ್ಷಗಳಿಂದ ಪಡೆದ ಗೃಹ ಸಾಲ ತೀರಿಸುವ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ಅದನ್ನು ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ;

ಉ) ನಾಲ್ಕಾರು ವರ್ಷಗಳಿಂದ ಸದರಿ ನೇಕಾರರ ಕೂಲಿ ದರ ಹೆಚ್ಚಿಸಿಲ್ಲದಿರುವುದರಿಂದ ಈಗಾಲಾದರೂ ಹೆಚ್ಚು ಮಾಡಲು ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆ ?